# ವಿಶೇಷ ಲೇಖನ

# ರಾಮಕೃಷ್ಣ ಮಹಾಸಂಘದ ಉಗಮ – ಒಂದು ರೋಮಾಂಚಕ ಕತೆ

**(೧೮೯೭ ರ ಮೇ ೧ ನೇ ತಾರೀಖಿನಂದು ಶ್ರೀರಾಮಕೃಷ್ಣರ ಭಕ್ತ ಬಲರಾಮ ಬೋಸರ ಮನೆಯಲ್ಲಿ, ಸ್ವಾಮಿ ವಿವೇಕಾನಂದರ ನೇತೃತ್ವದಲ್ಲಿ ನೆರೆದಿದ್ದ, ಸಾಧುಗಳ ಮತ್ತು ಭಕ್ತರ ಸಭೆಯಲ್ಲಿ 'ರಾಮಕೃಷ್ಣ ಮಿಷನ್' ಉಗಮವಾಯಿತು. ಇದರ ಸವಿ ನೆನಪಿಗಾಗಿ, ರಾಮಕೃಷ್ಣ ಮಹಾಸಂಘದ ಉಗಮ ಮತ್ತು ಆರಂಭದ ದಿನಗಳ ಬಗೆಗಿನ ವಿಶೇಷ ಲೇಖನ ಮಾಲೆಯನ್ನು ಪ್ರಸ್ತುತ ಪಡಿಸುತ್ತಿದ್ದೇವೆ. ಬರಹ: ಸಂ.)**

**ವೇ**ದಕಾಲೀನ ಹಿಂದೂ ಸಂಪ್ರದಾಯದಲ್ಲಿ ಸಂನ್ಯಾಸಿಗಳ ಸಂಘದ ಕಲ್ಪನೆ ಕಂಡುಬರುವುದಿಲ್ಲ. ಮೊಟ್ಟಮೊದಲಿಗೆ ಭಿಕ್ಷುಗಳ ಸಂಘವನ್ನು ಭಾರತದಲ್ಲಿ ಹುಟ್ಟು ಹಾಕಿದವನೆಂದರೆ ಭಗವಾನ್ ಬುದ್ಧ. ಅದು ಹಿಂದೂ ಧರ್ಮದ ವಿವಿಧ ಮಠ ಮತ್ತು ಆಶ್ರಮಗಳ ಸ್ಥಾಪನೆಗೆ ಎಡೆಮಾಡಿಕೊಟ್ಟಿತು ಎನ್ನಬಹುದು. ಈ ಹಿನ್ನೆಲೆಯಲ್ಲಿ ನೋಡಿದಾಗ ರಾಮಕೃಷ್ಣ ಮಹಾಸಂಘದ ಸ್ಥಾಪನೆ ಚಾರಿತ್ರಿಕವಾಗಿ ಒಂದು ಅಪೂರ್ವವಾದ ಘಟನೆ.

### ದಿವ್ಯಾನುಭೂತಿಯ ಪರಮಾನಂದ

ಶ್ರೀರಾಮಕೃಷ್ಣ ಪರಮಹಂಸರ ಜೀವನವು ಬಹಳ ಅರ್ಥಪೂರ್ಣವಾದುದು ಮತ್ತು ಜಗತ್ತಿನ ಇತಿಹಾಸದಲ್ಲಿಯೆ ಅತ್ಯಂತ ವಿಶಿಷ್ಟವಾದುದು. ಅವರದು ಭಗವನ್ಮಯವಾದ, ಹಲವಾರು ದಿವ್ಯ ದರ್ಶನಗಳು ಮತ್ತು ಅನುಭವಗಳಿಂದ ಸಮೃದ್ಧವಾದ ಬದುಕು. ಹಾಗೆಯೇ ಮುಂದೆ, ಉದಾರವಾದ ಒಂದು ಹೊಸ ಆಧ್ಯಾತ್ಮಿಕ ಪರಂಪರೆಗೆ ಆಕರವಾದ ಮುಂಬೆಳಕು ಕೂಡ. ಮಹಾತ್ಮ ಗಾಂಧಿ ಶ್ರೀರಾಮಕೃಷ್ಣರ ಜೀವನವನ್ನು ಹೀಗೆ ವಿವರಿಸುತ್ತಾರೆ: "ಶ್ರೀರಾಮಕೃಷ್ಣರ ಜೀವನವು ಧರ್ಮವು ಅನುಷ್ಠಾನಗೊಂಡಿರುವ ಒಂದು ಗಾಥೆಯಾಗಿದೆ. ಅವರ ಬಾಳು ನಮಗೆ ಭಗವಂತನನ್ನು ಮುಖಾಮುಖಿ ಕಂಡುಕೊಳ್ಳುವುದಕ್ಕೆ ಸಹಾಯಮಾಡುವುದು. ಭಗವಂತನೊಬ್ಬನೇ ಸತ್ಯ, ಉಳಿದುದೆಲ್ಲವೂ ಮಿಥ್ಯ ಎಂಬ ನಿಷ್ಕರ್ಷೆಗೆ ಬರದೆಯೆ ಅವರ ಜೀವನವನ್ನು ಪೂರ್ತಿಯಾಗಿ ಯಾರೂ ಅಧ್ಯಯನ ಮಾಡಲಾರರು." ಭಾರತದ ಪ್ರಾಚೀನ ಆಧ್ಯಾತ್ಮಿಕ ಮೌಲ್ಯಗಳಾದ ಶ್ರದ್ಧೆ, ಸಾಧನೆ, ಬ್ರಹ್ಮಚರ್ಯ, ಭಗವತ್ಸಾಕ್ಷಾತ್ಕಾರ ಮತ್ತು ವಿಶ್ವಪ್ರೇಮಗಳು ಅವರ ಜೀವನ ಮತ್ತು ಅನುಭವಗಳಲ್ಲಿ ಮೂರ್ತರೂಪವನ್ನು ಪಡೆದುಕೊಂಡವು. ಜನಸಾಮಾನ್ಯರನ್ನು ಅವರ ಪಾಪಪ್ರಜ್ಞೆಯಿಂದ ಮೇಲೆತ್ತುವ, ಸಾಧುಜನರ ಬಾಳನ್ನು ಬೆಳಗುವ, ಪಂಡಿತ ಪಾಮರರೆಲ್ಲರ ಅಂತರಂಗಗಳನ್ನು ತಮ್ಮ ದಿವ್ಯಾನುಭೂತಿಯ ಪರಮಾನಂದದಿಂದ ತುಂಬಿಬಿಡುವ ಭಗವತ್ ಕೃಪೆಯ ಸಂವಾಹಕರಾಗಿದ್ದರು ಶ್ರೀರಾಮಕೃಷ್ಣರು. ಮನೋವೈಜ್ಞಾನಿಕ ದೃಷ್ಟಿಯಿಂದಲೂ ಅವರ ಜೀವನ ಅತ್ಯಂತ ಸಾಹಸಮಯವೂ ರೋಮಾಂಚಕಾರಿಯೂ ಆಗಿತ್ತು. ತ್ಯಾಗ, ತಪಸ್ಸು, ಸಾಧನ ಮತ್ತು ಅನುಭವಗಳ ಕ್ಷೇತ್ರಗಳಲ್ಲಿ ಅವರದು ವೀರೋಚಿತ ಸಾಧನೆಗಳು. ಮಾನವ ಜನಾಂಗವನ್ನು ಉತ್ಕಟವಾಗಿ ಪ್ರೀತಿಸಿದ್ದ ಈ ಮಹಾಪುರುಷರು ಮಾನವತೆಯ ಆರಾಧಕರಾಗಿದ್ದರು; ಮಾನವತೆಯನ್ನು ದೈವತ್ವದೊಂದಿಗೆ ಸಂಯೋಜನೆಗೊಳಿಸುವ ಒಂದು ಅಪೂರ್ವ ಸೇತುವೆಯಾಗಿದ್ದರು.

### ಭವಿಷ್ಯದ ಸಂಕೇತಗಳು

೧೮೮೮, ಅಕ್ಟೋಬರ್ ೫ ರಂದು ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಮಧ್ಯಾಹ್ನ ಊಟವಾದ ನಂತರ ಭಕ್ತರೊಡನೆ ಮಾತುಕತೆಯಾಡುತ್ತ ಕುಳಿತಿದ್ದಾರೆ. ಮಹೇಂದ್ರನಾಥ ಗುಪ್ತನೆಂಬ ಭಕ್ತ ಹೇಳಿದ, "ಆಹಾ! ಇಲ್ಲಿಂದ ಒಂದು ಆಧ್ಯಾತ್ಮಿಕ ಪ್ರವಾಹವೊಂದು ಹರಿದರೆ ಎಷ್ಟು ಚೆನ್ನ! ಅದರ ರಭಸಕ್ಕೆ ಎಲ್ಲವೂ ಕೊಚ್ಚಿಕೊಂಡು ಹೋಗಿಬಿಡುತ್ತದೆ. ಹಾಗೂ ಈ ಸ್ಥಳದಿಂದ ಹೊರಬರುವ ಯಾವ ಸಂದೇಶವೂ ಸಂಕುಚಿತವಾಗಿರುವುದಿಲ್ಲ." ಶ್ರೀರಾಮಕೃಷ್ಣರು ಅವನ ಕಡೆ ನೋಡಿ ನಕ್ಕರಷ್ಟೆ.

ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಂಗಾತಿಯಾದ ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣರ ಹುಟ್ಟೂರಾದ ಕಾಮಾರಪುಕುರದಲ್ಲಿ ಇದ್ದಾಗ ಅವರಿಗೆ ಆದ ಒಂದು ದರ್ಶನ ಇದು: ಶ್ರೀರಾಮಕೃಷ್ಣರ ಅನೇಕ ಸಂನ್ಯಾಸಿ ಭಕ್ತರು ಅವರ ಒಡಗೂಡಿ ನಡೆದುಬರುತ್ತಿದ್ದಾರೆ. ಒಮ್ಮೆಗೆ ಶ್ರೀರಾಮಕೃಷ್ಣರ ಪಾದಗಳಿಂದ ಒಂದು ನೀರಿನ ಝರಿ ಹೊರಬಂದು, ಅಲೆ ಅಲೆಗಳಾಗಿ ಹರಿದು ಬರುತ್ತಿದೆ. ಶ್ರೀಮಾತೆಯವರು ಮನಸ್ಸಿನಲ್ಲಿಯೇ ಶ್ರೀರಾಮಕೃಷ್ಣರ ಪಾದಪದ್ಮಗಳಿಗೆ ಪುಷ್ಪಾರ್ಚನೆಯನ್ನು ಮಾಡುತ್ತಿದ್ದಾರೆ.

ಈ ಎರಡೂ ದರ್ಶನಗಳು ಭವಿಷ್ಯತ್ತಿನ ಸಂಕೇತಗಳಾಗಿವೆ ಎಂದು ಪರಿಗಣಿಸಬಹುದು. ಶ್ರೀರಾಮಕೃಷ್ಣರ ಪವಿತ್ರ ಜೀವನದ ಧ್ಯೇಯೋದ್ದೇಶಗಳಲ್ಲಿ ತಮ್ಮ ಜೀವನದಲ್ಲಿ ಒಡಮೂಡಿದ ಉದಾರ ಸಿದ್ಧಾಂತಕ್ಕೆ ಮುಡಿಪಾದ ಒಂದು ಪರಂಪರೆಯ ಸ್ಥಾಪನೆಯೂ ಒಂದಾಗಿತ್ತು. ಅದನ್ನು ಬರಿಯ ಸೈದ್ಧಾಂತಿಕ ರೂಪದಲ್ಲಿ ಮಾತ್ರ ಇರಿಸದೆ, ಸಾಂಘಿಕವಾಗಿ ಮತ್ತು ಅನುಷ್ಠಾನರೂಪದಲ್ಲಿ ತಂದದ್ದೇ ಐತಿಹಾಸಿಕ ದೃಷ್ಟಿಯಿಂದ ಶ್ರೀರಾಮಕೃಷ್ಣರ ಅಭೂತಪೂರ್ವ ಸಾಧನೆ ಎಂದು ಹೇಳಬಹುದು. ಅರ್ನಾಲ್ಡ್ ಟಾಯನ್‌ಬಿ ಈ ಶತಮಾನದ ಅತ್ಯಂತ ಶ್ರೇಷ್ಠ ಇತಿಹಾಸಜ್ಞರಲ್ಲಿ ಒಬ್ಬರು. ಅವರು ಹೇಳುತ್ತಾರೆ: "ಶ್ರೀರಾಮಕೃಷ್ಣರ ಸಂದೇಶದ ವೈಶಿಷ್ಟ್ಯವೇನೆಂದರೆ ಅದು ಕಾರ್ಯರೂಪದಲ್ಲಿ ವ್ಯಕ್ತವಾಗಿರುವುದು. ಆ ಸಂದೇಶವು ಹಿಂದೂಧರ್ಮದ ಸನಾತನ ಸಂದೇಶವು ಮೈದಾಳಿದಂತಿದೆ... ಅವರ ಧಾರ್ಮಿಕ ಚಟುವಟಿಕೆ ಮತ್ತು ಅನುಭವಗಳು ಎಷ್ಟೊಂದು ವ್ಯಾಪಕವಾಗಿವೆಯೆಂದರೆ ಭಾರತದಲ್ಲಿಯೇ ಆಗಲಿ ಅಥವಾ ಬೇರೆ ಕಡೆಯಲ್ಲಿಯೇ ಆಗಲಿ, ಇನ್ನಾವ ಧಾರ್ಮಿಕ ಮಹಾಪುರುಷರಿಗೂ ಇದನ್ನು ಸಾಧಿಸಲಾಗಲಿಲ್ಲ."



ಕಾಶೀಪುರದಲ್ಲಿ ಶ್ರೀರಾಮಕೃಷ್ಣರಿದ್ದ ಕೊಠಡಿ

ಶ್ರೀರಾಮಕೃಷ್ಣರ ಹೆಸರಿನಲ್ಲಿ ಸ್ಥಾಪಿತವಾದ ಈ ಮಹಾನ್ ಸಂಸ್ಥೆ ಭಾವನಾತ್ಮಕ ನೆಲೆಯಿಂದ ಕಾರ್ಯರೂಪಕ್ಕೆ ಹೇಗೆ ತಾನೆ ಬಂದಿತು? ಈ ನಿಟ್ಟಿನಲ್ಲಿ ಅವರು ಮಾಡಿದ್ದಾದರೂ ಏನು? – ಇದು ರೋಮಾಂಚಕಾರಿಯಾದ ಒಂದು ಸತ್ಯಕತೆಯೇ ಸರಿ.

## ಪ್ರಶಿಕ್ಷಣ ಕೇಂದ್ರವಾದ ಚಿಕಿತ್ಸಾ ಕೇಂದ್ರ

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಮ್ಮ ಕೇಂದ್ರ ಬಿಂದು ಶ್ರೀರಾಮಕೃಷ್ಣರೇ. ನಾವೆಲ್ಲರೂ ಆ ಕೇಂದ್ರ ದೀಪದಿಂದ ಹೊರಹೊಮ್ಮಿದ ಕಿರಣಗಳು." ಅವರು ಇನ್ನೊಂದು ಕಡೆ ಹೇಳುತ್ತಾರೆ: "ಶ್ರೀರಾಮಕೃಷ್ಣರು ಸ್ಥಾಪಿಸಿದಂತಹ ಸರ್ವಸಂಗಪರಿತ್ಯಾಗೀ ಭಕ್ತರ ಈ ಮಹಾಸಂಘದ ಸೇವೆಯಲ್ಲಿ ನನ್ನನ್ನೇ ಅರ್ಪಿಸಿಕೊಳ್ಳುವುದು ನನ್ನ ಮೇಲೆ ಬಿದ್ದಿದೆ. ನಾನು ಅದನ್ನು ಕಾಪಾಡಿಕೊಳ್ಳಲೇಬೇಕು. ನರಕವೋ ಮೋಕ್ಷವೋ, ಏನು ಬೇಕಾದರೂ ನನಗೆ ಒದಗಿ ಬರಲಿ, ಶ್ರೀರಾಮಕೃಷ್ಣರ ಆದೇಶವನ್ನು ನಾನು ಪಾಲಿಸಲೇಬೇಕು. ಅದೇನೆಂದರೆ, ಸರ್ವಸಂಗಪರಿತ್ಯಾಗಿಗಳಾದ ಅವರ ಶಿಷ್ಯರು ಒಂದೆಡೆ ಕೂಡಬೇಕು. ಆ ಕಾರ್ಯವನ್ನು ನನಗೆ ವಹಿಸಿಕೊಡಲಾಗಿದೆ."

ಕಾಶೀಪುರ ಕೊಲ್ಕತಾದ ಹೊರವಲಯದ ಒಂದು ಬಡಾವಣೆ. ಅಲ್ಲೊಂದು ತೋಟದ ಮನೆ. ಶ್ರೀರಾಮಕೃಷ್ಣರಿಗೆ ಗಂಟಲಿನ ಕ್ಯಾನ್ಸರ್ ಆಗಿದ್ದಾಗ ಶುಶ್ರೂಷೆಗಾಗಿ ಅವರನ್ನು ಅಲ್ಲಿ ಇರಿಸಲಾಗಿತ್ತು. ಅವರ ಸೇವೆಗಾಗಿ ಅಲ್ಲಿ ಅವರ ಭಕ್ತರು, ಅನುಯಾಯಿಗಳು ಸೇರಿದರು. ಅವರೆಲ್ಲ ಶ್ರೀರಾಮಕೃಷ್ಣರಿಗೆ ಔಷಧೋಪಚಾರಗಳು ಸಮರ್ಪಕವಾಗಿ ನಡೆಯುವಂತೆ ವ್ಯವಸ್ಥೆ ಮಾಡಿಕೊಂಡರು. ಭಕ್ತರ ಈ ಸಮ್ಮಿಳನ ಅವರುಗಳ ಮಧ್ಯೆ ಸಹೋದರಭಾವನೆಯನ್ನು ಉಂಟುಮಾಡಿ, ಮುಂದೆ ಮಹಾವೃಕ್ಷವಾಗಿ ಬೆಳೆದ ಮಹಾಸಂಘಕ್ಕೆ ಬೀಜರೂಪವಾಗಿ ಪರಿಣಮಿಸಿತು.

ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರೂ ಆದ ಸ್ವಾಮಿ ಬ್ರಹ್ಮಾನಂದಜಿ ಅವರು ಹೀಗೆ ಉದ್ಗರಿಸುತ್ತಾರೆ: "ನಮ್ಮ ಸಹಭಾಗಿತನವೆಲ್ಲ ಕೇಂದ್ರೀಕೃತವಾಗಿದ್ದು ಕಾಶೀಪುರದ ಈ ಉದ್ಯಾನವನದಲ್ಲಿ. ನಿಜವಾಗಿಯೂ ಅದು ನಮ್ಮ ಮೊದಲ ಮಠ."

೧೮೮೬ ಜನವರಿ ೧, ಶ್ರೀರಾಮಕೃಷ್ಣರು ಭಕ್ತರಿಗೆ ತಮ್ಮ ನೈಜಸ್ವರೂಪವನ್ನು ತೋರಿದ ಮಹತ್ವದ ದಿನ. ಅಂದು ದರ್ಶಿಸಿದ ಭಕ್ತರಿಗೆಲ್ಲ ಅವರು ತಾವು ಭಗವದವತಾರವೆಂದು ತೋರಿಸಿದ ಅಪೂರ್ವ ಘಳಿಗೆ ಅದು. ಅಂದಿನ ದಿನ ಶ್ರೀರಾಮಕೃಷ್ಣರ ದಿವ್ಯ ಅವತರಣದ ಆವಿರ್ಭಾವದ ದಿನ; ಹೆಚ್ಚು ಜನಪ್ರಿಯ ಅಭಿಪ್ರಾಯದಂತೆ ಇದು **"ಕಲ್ಪತರು ದಿನ"**.

ತಮ್ಮ ಈ ಅಸ್ವಸ್ಥತೆಯ ದಿನಗಳಲ್ಲಿ ಶ್ರೀರಾಮಕೃಷ್ಣರೇ ಸ್ವತಃ ರಾಮಕೃಷ್ಣ ಮಹಾಸಂಘಕ್ಕೆ ಭದ್ರವಾದ ಬುನಾದಿಯನ್ನು ಹಾಕುತ್ತಿದ್ದರು. ಅದಕ್ಕಾಗಿ ತಮ್ಮ ಅಂತರಂಗದ ಯುವಕಭಕ್ತರ ತರಬೇತಿಗೆ ಈ ಸಮಯದಲ್ಲಿ ವಿಶೇಷ ಗಮನ ಕೊಟ್ಟರು. ನರೇಂದ್ರನನ್ನು (ಸ್ವಾಮಿ ವಿವೇಕಾನಂದ) ನೇತಾರ ನನ್ನಾಗಿ ಹೊಂದಿರುವ ಈ ಯುವಭಕ್ತರು ಭವಿಷ್ಯದಲ್ಲಿ ಪ್ರಾಪಂಚಿಕ ಜೀವನವನ್ನು ತ್ಯಜಿಸುವರು ಮತ್ತು ಭಗವತ್ಸಾಕ್ಷಾತ್ಕಾರ ಹಾಗೂ ಮಾನವತೆಯ ಸೇವೆಗಳಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಡುವರು ಎಂಬ ಭವ್ಯ ಭವಿಷ್ಯದ ದರ್ಶನವನ್ನು ಅವರು ಈಗಾಗಲೇ ಕಂಡಿದ್ದರು. ಹೀಗೆ ಚಿಕಿತ್ಸಾ ಕೇಂದ್ರವಾಗಿದ್ದ ಕಾಶೀಪುರದ ತೋಟದ ಮನೆ ಶ್ರೀರಾಮಕೃಷ್ಣರ ಉದಾತ್ತ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಯುವಭಕ್ತರ ಪ್ರಶಿಕ್ಷಣ ಕೇಂದ್ರವಾಗಿ ಪರಿಣಮಿಸಿತು.


## ಆಂದೋಲನದ ಪ್ರವರ್ತಕರು

ಸ್ವಾಮಿ ವಿವೇಕಾನಂದರು ಆಗಸ್ಟ್ ೯, ೧೮೯೫ ರಲ್ಲಿ ಇಂಗ್ಲೆಂಡಿನ ಭಕ್ತ ಇ.ಟಿ. ಸ್ಟರ್ಡಿಗೆ ಬರೆದ ಪತ್ರದಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರು ನಮಗೆ ಕೊಟ್ಟ ದೊಡ್ಡ ಕೊಡುಗೆ ಏನು ಗೊತ್ತೆ? ಅವರು ಒಂದು ಆದರ್ಶಕ್ಕಾಗಿ ಬಾಳನ್ನು ರೂಪಿಸಿಕೊಳ್ಳಲು, ಕೇವಲ ಅದರ ಬಗ್ಗೆ ಮಾತನಾಡುವುದಲ್ಲ, ಅದಕ್ಕೆ ಬದಲಾಗಿ, ಜೀವನ ಪರ್ಯಂತ ಹೋರಾಟ ನಡೆಸಬೇಕು ಎಂಬ ಉತ್ಕಟ ಬಯಕೆಯನ್ನು ನಮ್ಮಲ್ಲಿ ಮೂಡಿಸಿದರು."

ಸ್ವಾಮಿ ಶಿವಾನಂದರು ೧೯೧೦ ರಲ್ಲಿ ಆಗಿನ ಬ್ರಿಟಿಷ್ ವೈಸ್‌ರಾಯ್‌ನ ಪತ್ನಿಯಾದ ಲೇಡಿ ಮಿಂಟೋ ಎಂಬುವವಳಿಗೆ ಹೀಗೆ ಹೇಳುತ್ತಾರೆ: "ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದವರು ಸ್ವಾಮಿ ವಿವೇಕಾನಂದರಾಗಲಿ ಅಥವಾ ಇನ್ನಾವ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾಗಲಿ ಅಲ್ಲ. ಯಾರ ಹೆಸರನ್ನು ಪಡೆದುಕೊಂಡು ಮುಂದೆ ಒಂದು ಸಂನ್ಯಾಸಿ ಸಂಪ್ರದಾಯ ಉದ್ಭವವಾಯಿತೋ ಆ ಶ್ರೀರಾಮಕೃಷ್ಣರೇ ಅದರ ಪ್ರವರ್ತಕರೂ ಕೂಡ".

೧೮೮೬ ರ ಎರಡನೆ ವಾರ. ವೃದ್ಧ ಗೋಪಾಲನೆಂಬ

ಭಕ್ತ (ಮುಂದೆ ಸ್ವಾಮಿ ಅದ್ವೈತಾನಂದರು) ಸಾಧು ಸಂನ್ಯಾಸಿಗಳಿಗೆ ಕಾವಿಬಟ್ಟೆ ಮೊದಲಾದ ಪರಿಕರಗಳನ್ನು ದಾನ ಮಾಡಲು ಇಚ್ಛಿಸಿದಾಗ ಶ್ರೀರಾಮಕೃಷ್ಣರು ಅವುಗಳನ್ನು ಅಲ್ಲಿರುವ ಯುವ ಶಿಷ್ಯರಿಗೇ ಕೊಡಲು ಆದೇಶ ನೀಡುತ್ತಾರೆ. "ಈ ಯುವಕರಿಗಿಂತ ಶ್ರೇಷ್ಠರಾದ ಸಾಧುಗಳು ಎಲ್ಲಿ ತಾನೆ ಸಿಗಬೇಕು?" ಎಂದು ಉದ್ಗರಿಸುತ್ತಾರೆ, ತಾವೇ ಸ್ವತಃ ಅವುಗಳನ್ನು ಹಂಚುತ್ತಾರೆ,



ಶ್ರೀರಾಮಕೃಷ್ಣರ ಹಸ್ತಾಕ್ಷರ

ಫೆಬ್ರವರಿ ೧೧, ೧೮೮೬, ಶ್ರೀರಾಮಕೃಷ್ಣರು ಒಂದು ಕಾಗದದ ಮೇಲೆ ಬಂಗಾಳಿಯಲ್ಲಿ ಹೀಗೆ ಬರೆದರು:**"ಜೈ ರಾಧೇ ಪ್ರೇಮಮಯಿ, ನರೇನ್ ಶಿಕ್ಷೇ ದಿಬೇ, ಯಾಖನ್ ಘರೇ ಬಾಹಿರೇ ಹಾಕ್ ದಿಬೇ. ಜೈ ರಾಧೇ"**– " ಪ್ರೇಮಮಯಿ ರಾಧೆಗೆ ಜಯವಾಗಲಿ. ನರೇನ್ ಬೋಧಿಸುತ್ತಾನೆ. ಈ ದೇಶದಲ್ಲಿ ಹೇಗೋ ಹಾಗೆಯೇ ವಿದೇಶದಲ್ಲೂ. ರಾಧೆಗೆ ಜಯವಾಗಲಿ." ನರೇಂದ್ರ ಇದು ತನಗೆ ಸಾಧ್ಯವಾಗದ ಕೆಲಸ ಎಂದು ವಿರೋಧ ವ್ಯಕ್ತಪಡಿಸಿದ. ಅದಕ್ಕೆ ಶ್ರೀರಾಮಕೃಷ್ಣರು ಕೊಟ್ಟ ಪ್ರತಿಕ್ರಿಯೆ ಏನು ಗೊತ್ತೆ? "ನಿನ್ನ ಮೂಳೆ ಮೂಳೆಗಳೂ ನಿನ್ನಿಂದ ಈ ಕೆಲಸವನ್ನು ಮಾಡಿಸುತ್ತವೆ."

ಮೇ ೧೮೮೬ ರ ಒಂದು ಸಂಜೆ ನರೇಂದ್ರನಿಗೆ ಶ್ರೀರಾಮಕೃಷ್ಣರ ಕೃಪೆಯಿಂದ ನಿರ್ವಿಕಲ್ಪ ಸಮಾಧಿಯ ಅನುಭವವಾಯಿತು. ಆಧ್ಯಾತ್ಮಿಕ ಜೀವನದ ಅತ್ಯುನ್ನತ ಹಂತ ಇದು. ಶ್ರೀರಾಮಕೃಷ್ಣರು ನಂತರ ಅವನಿಗೆ ಹೇಳಿದರು: "ಜಗನ್ಮಾತೆ ಈಗ ನಿನಗೆ ಎಲ್ಲವನ್ನೂ ತೋರಿಸಿಬಿಟ್ಟಿದ್ದಾಳೆ. ಆದರೆ ಇದನ್ನು ಒಡವೆಯನ್ನು ಒಂದು ಪೆಟ್ಟಿಗೆಯಲ್ಲಿ ಇರಿಸಿದ ಹಾಗೆ ನಿನ್ನಿಂದ ಗುಪ್ತವಾಗಿ ಇರಿಸಲಾಗುತ್ತದೆ. ಇದರ ಕೀಲಿಕೈ ನನ್ನ ಹತ್ತಿರ ಇರುತ್ತದೆ. ನೀನು ಈ ಜಗತ್ತಿನಲ್ಲಿ ಮಾತೆಯ ಕಾರ್ಯವನ್ನು ಮಾಡಿ ಮುಗಿಸಿದ ನಂತರವಷ್ಟೆ ಅದು ತೆಗೆಯಲ್ಪಡುವುದು ಮತ್ತು ನೀನು ಈಗ ಕಂಡುಕೊಂಡದ್ದೆಲ್ಲವೂ ಪುನಃ ಗೋಚರವಾಗುವುದು."

ಆಗಸ್ಟ್ ೧೬, ೧೮೮೬ ರಂದು ಶ್ರೀರಾಮಕೃಷ್ಣರ ಮಹಾಸಮಾಧಿ ಯಾಯಿತು. ಅದಕ್ಕೆ ನಾಲ್ಕು ದಿನಗಳಿಗೆ ಮುಂಚೆ ಅವರು ತಮ್ಮೆಲ್ಲ ಶಕ್ತಿಯನ್ನು ನಿಗೂಢವಾದ ರೀತಿಯಲ್ಲಿ ನರೇಂದ್ರನಿಗೆ ರವಾನಿಸಿದರು. ಆಗ ಅವರು ಅವನಿಗೆ ಹೇಳಿದರು: "ನಾನು ಈಗ ಬರಿಯ ಫಕೀರನಾಗಿಬಿಟ್ಟೆ". ಆಗ ನರೇಂದ್ರ ಶ್ರೀರಾಮಕೃಷ್ಣರ ಮಹಾನ್ ಕಾರ್ಯದ ಭಾರವನ್ನು ಹೆಗಲಿನಲ್ಲಿ ಹೊತ್ತುಕೊಳ್ಳಲು ಶಕ್ತನಾದ. ಆ ಸಂದರ್ಭದಲ್ಲಿ ತಮಗೆ ಆದ ಅನುಭವವನ್ನು ಮುಂದೆ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರು ಯಾವುದನ್ನು ಕಾಳಿ ಎಂದು ಕರೆಯುತ್ತಿದ್ದರೋ ಅವಳು ನನ್ನನ್ನು ಆಗ ಪ್ರವೇಶಿಸಿದಳು."

ಸ್ವಾಮಿ ವಿವೇಕಾನಂದರಿಗೆ ತಾವು ಕೈಗೊಳ್ಳಬೇಕಾದ ಭವಿಷ್ಯದ ಮಹಾನ್ ಕಾರ್ಯದ ಬಗ್ಗೆ ಸ್ಪಷ್ಟವಾದ ಅರಿವಿತ್ತು. ತಮ್ಮ ಸಹೋದರ ಸಂನ್ಯಾಸಿಗಳ ನೇತಾರ ಎಂಬ ಅಹಂಭಾವನೆ ಅವರಿಗೆ ಇರಲಿಲ್ಲ. ಅದಕ್ಕೆ ಬದಲಾಗಿ, ತಾನು ತನ್ನ ಸೋದರ ಸಂನ್ಯಾಸಿಗಳ 'ಸೇವಕ' ಎಂಬ ವಿನೀತ ಭಾವ ಅವರಲ್ಲಿ ಇತ್ತು. ಅವರಲ್ಲಿದ್ದ ಆಂತರಿಕ ದೃಢ ವಿಶ್ವಾಸವನ್ನು ಮುಂದೆ ತಮ್ಮ ಒಂದು ಉಪನ್ಯಾಸದಲ್ಲಿ ಅವರು ಹೀಗೆ ವ್ಯಕ್ತಪಡಿಸುತ್ತಾರೆ:

"ಶ್ರೀರಾಮಕೃಷ್ಣ ಪರಮಹಂಸರ ಧ್ಯೇಯೋದ್ದೇಶಗಳು ಭಾರತದ ಪುನರುಜ್ಜೀವನವನ್ನು ತರುವುದು ಮಾತ್ರವಲ್ಲ, ಇತರ ಹಲವಾರು ಭೂಪ್ರದೇಶಗಳಲ್ಲೂ ಅನೇಕ ವಿದೇಶೀ ಜನಾಂಗಗಳಿಗೆ ಕೂಡ ಒಳ್ಳೆಯ ದಿನಗಳನ್ನು ತರಬಲ್ಲದು ಎಂದು ನಾನು ನನ್ನ ಜೀವದಷ್ಟೆ ಉತ್ಕಟವಾಗಿ ನಂಬುತ್ತೇನೆ. ಈ ಧ್ಯೇಯಗಳು ಜಗತ್ತಿನಿಂದ ಮರೆಯಾಗುವುದಕ್ಕಿಂತಲೂ ಕೆಲವು ವ್ಯಕ್ತಿಗಳು ಈ ಧ್ಯೇಯಗಳನ್ನು ಎತ್ತಿಹಿಡಿಯಲು ಕಷ್ಟಪಡುವುದು ಮತ್ತು ನರಳುವುದೇ ಮೇಲು ಎಂದು ಅಂತಹ ನಂಬಿಕೆಯಿಂದಲೇ ನನಗೆ ಖಚಿತವಾಗಿದೆ. ನನ್ನ ಒಬ್ಬಳು ತಾಯಿ, ಇರುವ ಇಬ್ಬರು ಸಹೋದರರು ಸತ್ತುಹೋದರೇನಂತೆ? ಆಹುತಿ ಆಗಲಿ ಬಿಡಿ. ಆತ್ಮಾಹುತಿಯಾಗದೆ ಯಾವ ಮಹಾನ್ ಕಾರ್ಯವೂ ಸಾಧ್ಯವಾಗದು. ಹೃದಯವನ್ನು ಕಿತ್ತು, ಆ ರಕ್ತಸಿಕ್ತ ಹೃದಯವನ್ನು ಆದರ್ಶದ ವೇದಿಕೆಯ ಮೇಲೆ ಬಲಿ ಕೊಡಲೇಬೇಕು. ಆಗ ಮಾತ್ರವೇ ಭವ್ಯವಾದ ಕಾರ್ಯಗಳು ಜರುಗುತ್ತವೆ."

*(ಮುಂದುವರಿಯುವುದು)*


**ಪ್ರಿಯ ಓದುಗರೇ, ದಯವಿಟ್ಟು ಗಮನಿಸಿ**

**ವಿವೇಕಪ್ರಭ ಪತ್ರಿಕೆಯ ಚಂದಾವಿವರ, ಪತ್ರಿಕೆಯು ಸಕಾಲದಲ್ಲಿ ಬರದಿದ್ದರೆ ವಿಚಾರಣೆ – ಮುಂತಾದವುಗಳ ಬಗ್ಗೆ ನೀವು ಈ ಕೆಳಗಿನ ಮೊಬೈಲ್ ದೂರವಾಣಿ ಸಂಖ್ಯೆಗೆ ನೇರವಾಗಿ ಕರೆಮಾಡಬಹುದು:**

**9481533505 (ಶ್ರೀ ಕೆ. ಪಿ. ವೇಣುಗೋಪಾಲ್)**

(ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ಮಾತ್ರ, ಭಾನುವಾರ ಮತ್ತು ರಜಾದಿನಗಳನ್ನು ಹೊರತುಪಡಿಸಿ.)